# "ಶ್ರೀ ಗೋಪಾಲ ದಾಸರು – ಶ್ರೀ ಪ್ರಸನ್ನ ವೆಂಕಟದಾಸರ ಮೇಲೆ ರಚಿಸಿದ ಕೃತಿ – ಹರಿದಾಸರಾನಂದ ನೋಡಿ ಬಂದೆ ಸಿರಿ ಪ್ರಸನ್ವೇಂಕಟನ ಕಿಂಕರು ಇವರೆಂದು"

– ಒಳನೋಟ
– ಡಾ. ಸುಭಾಸ ಕಾಕಂಡಕಿ
ದೂರವಾಣಿ: 9448011954

**ಹರಿದಾಸರಾನಂದ ನೋಡಿ ಬಂದೆ**
**ಸಿರಿ ಪ್ರಸನ್ವೇಂಕಟನ ಕಿಂಕರು ಇವರೆಂದು ।**
**ಸಿರ ಬಾಗಿ ನಮಿಸಿ ನಾ ಧನ್ಯತೆಯ ಕಂಡೆ ॥ ಅ. ಪ. ॥**

ಈ ಕೃತಿಯನ್ನು ಗೋಪಾಲದಾಸರು ಶ್ರೀ ಪ್ರಸನ್ನವೆಂಕಟದಾಸರನ್ನು ಭೇಟಿಯಾದ ಸಂದರ್ಭದಲ್ಲಿ, ಶ್ರೀ ಪ್ರಸನ್ನವೆಂಕಟದಾಸರ ಆಧ್ಯಾತ್ಮಿಕ ಸಾಧನೆ, ಜ್ಞಾನ ಸಂಪತ್ತು ಹಾಗೂ ಅವರ ದೈವಿಕ ತೇಜಸ್ಸನ್ನು ಕಂಡು ಮುಕ್ತ ಕಂಠದಿಂದ ಪ್ರಸನ್ನವೆಂಕಟರನ್ನು ಕೊಂಡಾದಿದ್ದಾರೆ. ಇದರಿಂದ ಶ್ರೀ ಪ್ರಸನ್ನ ವೆಂಕಟರ ಆಧ್ಯಾತ್ಮಿಕ ಸಾಧನೆ ಎಷ್ಟು ಉನ್ನತ ಮಟ್ಟದ್ದು ಎಂಬುದು ಸ್ಪಷ್ಟವಾಗುತ್ತದೆ.

ಇಲ್ಲಿ ಗೋಪಾಲದಾಸರು – "ಹರಿದಾಸರಾನಂದ ನೋಡಿ ಬಂದೆ" ಎಂಬ ಪಲ್ಲವಿಯಿಂದಲೇ ತಮ್ಮ ರಚನೆಯನ್ನು ಪ್ರಾರಂಭಿಸುತ್ತಾರೆ. ಹರಿದಾಸ ಆನಂದ – ಹರಿದಾಸರಾದವರಿಗೇ ಗೊತ್ತು. ಇಂತಹ ಆನಂದಮಯ ಪ್ರಸಂಗವನ್ನು ಶ್ರೀ ಪ್ರಸನ್ನವೆಂಕಟದಾಸರನ್ನು ಕಂಡ ಸಂದರ್ಭದಲ್ಲಿ ಅದ್ಭುತವಾಗಿ ವರ್ಣಿಸುತ್ತಾರೆ.

ಇವರು ಸದಾಕಾಲ ಭಗವಂತನ (ಪ್ರಸನ್ನವೆಂಕಟನ) ನಾಮ ಸ್ಮರಣೆಯಲ್ಲಿ ಧ್ಯಾನದಲ್ಲಿ ನಿರತರಾಗಿ, ಶ್ರೀ ವೆಂಕಟೇಶನ ದಾಸಾನುದಾಸರಾಗಿ, ಅವನು ಅನುಗ್ರಹಿಸಿದ ಆನಂದಮಯ ಸ್ಥಿತಿಯಲ್ಲಿರುವ ಮಹಾನುಭಾವರಾದ ಶ್ರೀ ಪ್ರಸನ್ನವೆಂಕಟದಾಸರನ್ನು ನೋಡಿ ಬಂದೆ. ಹಾಗೇ ಇವರು ಶ್ರೀ ಪ್ರಸನ್ನ ವೆಂಕಟನ ಕಿಂಕರರು ಎಂದು ಅವರಿಗೆ ಸಿರಬಾಗಿ ನಮಿಸಿ ನಾ ಧನ್ಯತೆಯ ಕಂಡೆ! ಎಂದು ಅನುಪಲ್ಲವಿಯಲ್ಲಿ ದಾಖಲಿಸಿದ್ದಾರೆ. ಇನ್ನು ಮೊದಲ ನುಡಿಯಲ್ಲಿ:

**ಮನವನರ್ಪಿಸಿ ಹನುಮನಯ್ಯನಲಿ ದಿನದಿನ**
**ಘನ ಭಕುತಿ ವೈರಾಗ್ಯ ಪಡೆದ ಸಂಪನ್ನ**
**ಸನ್ನುತವು ಸುಖತೀರ್ಥ ಮತತತ್ವದಧ್ಯಯನ**
**ಜ್ಞಾನ ಧ್ಯಾನದ ತವರು ಹರಿದಾಸರತುನ ॥ 1 ॥**

ಇನ್ನು ಶ್ರೀ ಪ್ರಸನ್ನವೆಂಕಟರ ದಿನಚರಿಯಾದರೂ ಎಂತಹುದು? ಸದಾಕಾಲ ಹನುಮಯ್ಯನ, ಅಂದರೆ, ಯಾವನನ್ನು ತನ್ನ ಪಿತನೆಂದು ಅನುಗಾಲ ಭಜಿಸುವ ಹನುಮನ ಅಂತರ್ಗತನಾದ ಶ್ರೀಹರಿಯನ್ನು ನೆನೆಯುತ್ತಾ, ಆಸೆ-ಆಸಕ್ತಿಗಳನ್ನು ತೊರೆಯುತ್ತ ಭಕುತಿ-ವೈರಾಗ್ಯವನ್ನು ಪಡೆಯುತ್ತಾ, ಯಾವ ತತ್ತ್ವ ಸಿದ್ಧಾಂತಗಳಿಂದ ಹರಿ ಸರ್ವೋತ್ತಮತ್ವವನ್ನು ತಿಳಿಸುವ ಸುಖತೀರ್ಥರ ದ್ವೈತ ಸಿದ್ಧಾಂತವನ್ನು ಅಧ್ಯಯಿಸಿ, ಅರಗಿಸಿಕೊಳ್ಳುತ್ತ ದಿನ ಕಳೆಯುವ ಸಂಪನ್ನರಾದ ಜ್ಞಾನ-ಧ್ಯಾನದ ಖಣಿಯಾದ ಹರಿದಾಸ ರತ್ನ ಎಂದೆನಿಸಿದ ಶ್ರೀ ಪ್ರಸನ್ನವೆಂಕಟರ ಕಂಡೆ ಎಂದು ಹೇಳಿ ಅವರ ಜ್ಞಾನ ಸಂಪತ್ತನ್ನು ಹಾಡಿ ಹೊಗಳಿದ್ದಾರೆ.

ಇನ್ನು ಮುಂದಿನ 2ನೆಯ ನುಡಿಯಲ್ಲಿ:

**ಸಾಕಲ್ಯ (ಸಾಲೋಕ್ಯ) ಸಾರೂಪ್ಯ – ಸಾಯುಜ್ಯ ಸುಖವಾ ।**
**ಸಕಲ ಶ್ರವಣಾದಿ – ನವ ಭಕುತಿ ಸಾಧನವಾ–**
**ನೇಕ ತಾ ಗಳಿಸಿ ನಿಜ ಹರಿ ಭಕುತರೆನಸಿ ।**
**ಲೋಕ ಪಾವನರೆನಸಿ ಮೆರೆಯತಿಹ ತೇಜಸ್ವಿ ॥ 2 ॥**

ಈ ನುಡಿಯಲ್ಲಿ ಶ್ರೀ ಪ್ರಸನ್ನವೆಂಕಟರ ಆಧ್ಯಾತ್ಮಿಕ ತೇಜಸ್ಸನ್ನು, ಅದಕ್ಕೆ ಪೂರಕವಾದ ಅವರ ಸಾಧನೆಯನ್ನು ದಾಖಲಿಸಿದ್ದಾರೆ. ಶ್ರೀ ಪ್ರಸನ್ನವಂಕಟರು ತಮ್ಮ ಮುಕುತಿ ಪಥಕ್ಕೆ ನವವಿಧ ಭಕುತಿಯ ಮೆಟ್ಟಿಲುಗಳನ್ನು ಸಾಧನವನ್ನಾಗಿ ಮಾಡಿಕೊಂಡು, ಸಾಲೋಕ್ಯ-ಸಾರೂಪ್ಯ-ಸಾಯುಜ್ಯವೆಂಬ ಮೋಕ್ಷ ಸುಖದ ಸಾಧನೆಗೆ, ಸತತ ಹರಿನಾಮ ಶ್ರವಣ ಸಂಕೀರ್ತನೆ, ಸ್ಮರಣೆ ಎಲ್ಲವನ್ನು ಮೇಳೈಸಿಕೊಂಡು ಹರಿಭಕುತಿಗೆ ನಿಜವಾದ ಗುಣಶೀಲರೆನಿಸಿ, ತಮ್ಮ ವೈರಾಗ್ಯ-ಭಕ್ತಿ ಸಾಧನದೊಂದಿಗೆ ತಮ್ಮ ಸುತ್ತಲಿನ ಲೋಕವನ್ನು ಪಾವನ ಮಾಡುತ್ತ ಮೆರೆಯುವ ತೇಜಸ್ವಿಯನ್ನು ಕಂಡೆ ಎಂದು ಅವರ ಆಧ್ಯಾತ್ಮಿಕ ತೇಜಸ್ಸನ್ನು ದಾಖಲಿಸಿದ್ದಾರೆ.

ಇನ್ನು ಕೊನೆಯ ನುಡಿಯಲ್ಲಿ:

**ದಿಟದಿ ಬಾಗಿಲಕೋಟೆ ಘಟತಟಾಪುರದಿ**
**ಘೋಟನಾಮಗಳ್ಹಚ್ಚಿ ತಂಬೂರಿ ಮೀಟುತ್ತ**
**ವಟ ಪತ್ರಶಾಯಿ ಹರಿ ಗೋಪಾಲ ವಿಠ್ಠಲನ**
**ಧಿಟವಾದ ನಾಮಗಳ ವಟಿ ವಟಿಸುವಂಥ ॥ 3 ॥**

ಎಂದು ಹೇಳುತ್ತ ಶ್ರೀ ಪ್ರಸನ್ನವೆಂಕಟದಾಸರು ಇರುವ ಸ್ಥಳ ಅಂತಿಂತಹದಲ್ಲ, ಬಾಗಲಕೋಟೆಯ ಘಟಪ್ರಭೆ ನದಿ ತಟದಲ್ಲಿರುವ ಪರಮ ಪವಿತ್ರವಾದ ಸನ್ನಿಧಿಯಲ್ಲಿ (ದಾಸರ ಕಾಲದಲ್ಲಿ ಬಾಗಲಕೋಟೆ 70ಕ್ಕೂ ಹೆಚ್ಚು ಚತುರ್ವೇದ ಪಂಡಿತರಿರುವ ಮಧ್ವಶಾಸ್ತ್ರದ ದೊಡ್ಡ ಬ್ರಾಹ್ಮಣರ ಅಗ್ರಹಾರವಾಗಿತ್ತು) ಶುದ್ಧ ಆಚರಣೆಗಳನ್ನು ಮಾಡುತ್ತ, ತಂಬೂರಿ ಮೀಟುತ್ತ ವಟ ಪತ್ರಶಾಯಿಯಾದ ಬಾಲಗೋಪಾಲನ, ಸಿರಿ ವೆಂಕಟೇಶನ ನಾಮವನ್ನು ಸದಾ ಸ್ಮರಣೆ ಗೆಯ್ಯುತ್ತ, ಹರಿನಾಮ ಸ್ಮರಣೆಯೇ ತಮ್ಮ ಪರಮ ಭಾಗ್ಯವೆಂದು ಹರಿಯಲಿ ತಾದ್ಯಾತ್ಮ ಹೊಂದಿದ ಹರಿದಾಸರಾನಂದ ಕಂಡೆ ಎಂದು ಒಬ್ಬ ಮಹಾನ್ ಹರಿದಾಸರು ಇನ್ನೊಬ್ಬ ಹರಿದಾಸರನ್ನು ಕೊಂಡಾಡಿದ ಬಗೆ ಇದು.